ಮುಸುಡಿಯುಬ್ಬಿಸಿದ ಚಿನ್ನು, ಅದೇ ತಮಾಷೆಯ ನಡುವೆ ಅಪ್ಪನನ್ನು ಹೊಡೆಯುವಂತೆ ನಟಿಸಿದಳು!

ಮೂವರ ನಡುವಿನ ಖುಷಿ–ತಮಾಷೆಗಳು ಅತ್ಯುತ್ಕಟವಾಗಿ ಫಲಿಸುವಂತಹ ಸುದ್ದಿಯನ್ನು, ಚಿನ್ನು, ಮೂರನೇ ತಿಂಗಳಿಗೆಲ್ಲ ಒತ್ತರಿಸಿ ತಂದು ನಮ್ಮೆದುರಿಗಿಟ್ಟಳು. ಮನೆಯಲ್ಲಿ ಹಬ್ಬವೇ ಮೊದಲಾಗಿಬಿಟ್ಟಿತು! ನಮ್ಮಿಬ್ಬರ ದಿಕ್ಕುದಿಕ್ಕಿಗೂ ಸಂಭ್ರಮದ ಹಕ್ಕು ದಕ್ಕಿಬಂದಿತು!

ತಿಂಗಳ ಹಿಂದೊಂದು ಸಂಜೆ, ನೀಲಿ ಆಫೀಸಿನಿಂದ ಬರುವಾಗ ಮಗಳ ಮದುವೆಯ ಖಾಯಿಷಿನೊಡನೆಯೇ ಮನೆಯೊಳಕ್ಕೆ ಬಂದರು. ಮನೆಯೆದುರು ಕಾರು ನಿಲ್ಲಿಸಿ ಒಳಬರುವುದಕ್ಕೂ, ಅವರ ಕಿಸೆಯಲ್ಲಿನ ಮೊಬೈಲು ಚಿನ್ನುವಿನ ವಾಟ್ಸ್ಯಾಪು ಬೀಪುವುದಕ್ಕೂ ಸಮಸಮ ಹೊಂದಿಬಂದವು! ಮೆಸೇಜನ್ನು ತಕ್ಷಣವೇ ಓದಿಕೊಂಡು, ಅಡುಗೆಮನೆಯಲ್ಲಿ ಡಿಕಾಕ್ಷನಿಗೆ ನೀರು ಕುದಿಸುತ್ತಿದ್ದ ನನ್ನವರೆಗೂ –'ಎಲೆಲೇ ಕನಕವಾರಿ... ಹೊಂದಿಬಂದಿದೆ ದಾರಿ. ಈ ಸುದ್ದಿಯಿಂದ ಹಬ್ಬೀತು ಮನೆತುಂಬ ಖುಷಿಯ ಮಾರಿ!!' ಎಂದು ಕೂಗಿ ಕೂಗಿ, ಎಂದಿನಂತೆ ತಮಾಷೆಯ ಪ್ರಾಸ ಹೇಳಿದರು.

'ಒಡೆಯಾ... ಏನೆಂದು ತಿಳಿಸಬಹುದೆ ಸುದ್ದಿಯನ್ನು ಸಾರಿ ಸಾರಿ?!' ನಾನೂ ಸಪ್ರಾಸವಾಗಿ ಕೋರಿದೆ!

'ಹೇಳಲೇನು ಕೊಡುತ್ತೀಯೆ ಕಾಫಿಯನ್ನು ಎರಡು ಬಾರಿ?'

'ಸರಿ ಸರಿ... ಮೊದಲು ಹೇಳಿ ವಿಷಯವೇನು ಎಂದು ಒಂದು ಸಾರಿ!!'

ನೀಲಿ, ಸುತ್ತಿಬಳಸುವ ಮಾತಿನ ನಡುವೆಯೇ ಮಗಳು ಕಳಿಸಿದ ಮೆಸೇಜು ಓದಿದರು! ದೇವರೇ... ನಂಬಲೇ ಆಗಲಿಲ್ಲ... ಸಂತೋಷಕ್ಕೇ ಆ ಸಂತೋಷದ ಪಾರವಿರಲಿಲ್ಲ. ಸ್ವರ್ಗದ ದೇವತೆಗಳೆಲ್ಲ ಒಟ್ಟೊಟ್ಟಿಗೆ ಬಂದಿಳಿದು ನಮ್ಮನ್ನು ಹರಸಿದಂತನ್ನಿಸಿತು!

'ಅಪ್ಪ... ನಾಚುಗೆ ಆಗುತಿದೆ...' ಚಿನ್ನು ಬರೆದಿದ್ದಳು. 'ನನಗೊಬ್ಬ ಸಿಕ್ಕಿದ್ದಾನೆ. ಅಮ್ಮನ ಕನಸು ನಿಜವಾಗಿಸುವವನು... ಅವಳ ಪ್ರಾರ್ಥನೆಗಳನ್ನು ಆಕೃತಿಸಬಲ್ಲವನು...' ಅವಳು ಆಫೀಸಿನಿಂದಲೇ ಕಳಿಸಿದ ಮೆಸೇಜು. 'ನೀವೇ ಅಮ್ಮನಿಗೆ ತಿಳಿಸಿ. ಸಂಜೆ ಬಂದು ಮಾತಾಡುವೆ...'

ತಕ್ಷಣ ಎದ್ದು ದೇವರಕೋಣೆಗೆ ಹೋಗಿ ತುಪ್ಪದ ದೀಪ ಬೆಳಗಿದೆ. ನನ್ನೊಳಗೇ ನಗುತ್ತ ನಲಿಯುತ್ತ, ಮನಸೊಳಗೇ ಸುದ್ದಿ ಮೆಲುಕುತ್ತ, ಮತ್ತೆ ಮತ್ತೆ ಮೆಸೇಜೋದುತ್ತ ಕಳೆದುಹೋದೆ. ಆ ಬಳಿಕ, ಗಂಡ ಹೆಂಡತಿ ಒಟ್ಟಾಗಿ ಮಗಳು ವಾಪಸಾಗುವುದನ್ನೇ ಎದುರುನೋಡಿಕೊಂಡು ಕಾದೆವು. ಕಾಯುತ್ತಲೇ ಸಿಹಿಯಡುಗೆ ಮಾಡಿದೆವು. ನಾನು ಶಾವಿಗೆಯ ಖೀರು ಪಾಕಿಸಿದರೆ, ನೀಲಿ– ಮಗಳಿಗಿಷ್ಟವಾದ ಬಾಳೆಹಣ್ಣಿನ ಕೇಕು ಬೇಕಿಸಿಟ್ಟರು. ಬೇಕೆಂದೇ ಹೆಚ್ಚು ಹೆಚ್ಚು ದ್ರಾಕ್ಷಿ–ಗೋಡಂಬಿಯಿಟ್ಟು ರುಚಿ ಹೆಚ್ಚಿಸಿದೆವು.

ಚಿನ್ನು ಬಂದಳು. 'ಹೇಳಿದ್ದಾಯಿತಾ?' ಕಣ್ಣಲ್ಲಿಯೇ ಅಪ್ಪನನ್ನು ಕೇಳಿದಳು. ನೀನೇ ಹೇಳೆಂದು ಅಪ್ಪ ಮಗಳಿಗೆ ಮರುಸನ್ನೆ ಮಾಡಿದರು. ನೀನು–ತಾನೆಂದು ಕೆಲಗಳಿಗೆ, ಕೈ–ಬಾಯ್ಸನ್ನೆಯ ಚೌಕಾಸಿ ನಡೆಯಿತು. 'ಏನದು? ಇಬ್ಬರೂ ಊಟಕ್ಕೇಳಿ...' ನಾನೂ, ಬೇಕೆಂದೇ ಸುಳ್ಳು ಸುಳ್ಳೇ ಗದರಿ, ಇಬ್ಬರನ್ನೂ ಮೇಜಿಗೆ ಕರೆದೊಯ್ದೆ. 'ಏನಮ್ಮ ಇದು? ಯಾಕಿಷ್ಟೆಲ್ಲ ಸಜ್ಜು ಮಾಡಿದ್ದೀ?' ವಿಶೇಷವಾಗಿ ಅಣಿಗೊಂಡ ಮೇಜು ನೋಡಿದ ಚಿನ್ನು ಕೇಳಿದಳು. 'ಇವೊತ್ತು ನನ್ನ ಮಗಳೊಂದು ಒಳ್ಳೇ ಸುದ್ದಿ ಕೊಡುತಾಳೇಂತ ಸುದ್ದಿ ಬಂತು...' ಎಂದು ಸೋಗಿನ ಭಿಡೆ ಮಾಡಿದೆ.

ಮುಂದಿನದೆಲ್ಲ ಸಿನೆಮಾದಲ್ಲಿ ನಡೆಯುವ ಪಟಕತೆಯೆಂಬಂತೆ ಜರುಗಿತು!